# ಮಲೇರಿಯ ನಿರೋಧಕ!

ಮಲೇರಿಯವನ್ನು ಪರಿಣಾಮಕಾರಿಯಾಗಿ ತಡೆಯಲು ಅನುಕೂಲವಾಗುವಂತೆ ಲಂಡನ್ನಿನ ವಿಜ್ಞಾನಿಗಳು ಮೂರು ಬಗೆಯ ಹೊಸ ರೋಗ ನಿರೋಧಕ ಔಷಧಗಳನ್ನು ಕಂಡುಹಿಡಿದಿದ್ದಾರೆ.

ಮಲೇರಿಯ ನಿರ್ಮೂಲನೆಗೆ ಇದು ಹೊಸ ಅಸ್ತ್ರ ಎಂದು ತಮ್ಮ ಸಂಶೋಧನೆಯನ್ನು ಬಣ್ಣಿಸಿರುವ ವಿಜ್ಞಾನಿಗಳು, ಮಲೇರಿಯವನ್ನು ಸಮರ್ಥವಾಗಿ ತಡೆಯಲು ನೂತನ ಔಷಧ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಮಲೇರಿಯ ಸೂಕ್ಷ್ಮಾಣು ನಿರ್ಮೂಲನೆಗಾಗಿ ಐದು ದಶಕಗಳಿಂದ ಹೊಸ ಹೊಸ ಔಷಧಗಳನ್ನು ಪ್ರಯೋಗಿಸಲಾಗುತ್ತಿತ್ತು. ಕ್ರಮೇಣ ಸೂಕ್ಷ್ಮಾಣುಗಳು ಔಷಧ ನಿರೋಧ ಶಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದವು. ಆದ್ದರಿಂದ ಚಿಕಿತ್ಸೆ ಸವಾಲಾಗಿ ಪರಿಣಮಿಸುತ್ತಿತ್ತು. ಆದರೆ, ಈಗ ರೋಗಾಣುಗಳೇ ದೇಹವನ್ನು ಪ್ರವೇಶಿಸದಂತೆ ತಡೆಯುವ ಮುಂಜಾಗ್ರತೆ ಕ್ರಮ ಅತ್ಯಂತ ಉಪಯುಕ್ತ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ಡೆಂಗೆ ಜ್ವರಕ್ಕೆ ಸರಳ ಮದ್ದು!

ಈಗಾಗಲೇ ಅಸ್ತಮಾಕ್ಕೆ ಬಳಸುತ್ತಿರುವ ಸಾಮಾನ್ಯ ಔಷಧವನ್ನೇ ಸೊಳ್ಳೆಗಳಿಂದ ಬರುವ ಭಯಾನಕ ಕಾಯಿಲೆ ಡೆಂಗೆಗೂ ಬಳಸಬಹುದು ಎನ್ನುವ ಸಂಗತಿ ಸಂಶೋಧಕರ ಹೊಸ ಅಧ್ಯಯನದಿಂದ ತಿಳಿದುಬಂದಿದೆ.

ಸಂಶೋಧಕರು ಈ ನಿಟ್ಟಿನಲ್ಲಿ ತಮ್ಮ ಅಧ್ಯಯನವನ್ನು ಇಲಿಗಳ ಮೇಲೆ ಪ್ರಯೋಗಿಸಿ ಉದ್ದೇಶಿತ ಫಲಿತಾಂಶವನ್ನು ಪಡೆದಿದ್ದಾರೆ. ಭಯಾನಕವಾದ ಡೆಂಗೆ ಜ್ವರಕ್ಕೆ ತಕ್ಷಣದ ಚಿಕಿತ್ಸೆ ದೊರೆಯದಿದ್ದರೆ ರೋಗಿಗೆ ಸಾವು ಸಂಭವಿಸುವ ಸಾಧ್ಯತೆ ಹೆಚ್ಚಿತ್ತು. ಆದರೆ, ಈಗ ಅದಕ್ಕೆ ಚಿಕಿತ್ಸೆಯನ್ನು ಸುಲಭವಾಗಿ ನೀಡಬಹುದು ಎಂಬ ವಿಶ್ವಾಸವನ್ನು ಸಂಶೋಧಕರು ವ್ಯಕ್ತಪಡಿಸಿದ್ದಾರೆ.

# ಅತಿನಿದ್ದೆ ಒಳ್ಳೆಯದಲ್ಲ!

ಅತಿಯಾಗಿ ನಿದ್ದೆ ಹೊಡೆಯುವುದು ಗಂಡಾಂತರವನ್ನೇ ಉಂಟುಮಾಡುತ್ತದೆ ಎಂಬ ಎಚ್ಚರಿಕೆಯನ್ನು ಹೊಸ ಅಧ್ಯಯನವೊಂದು ನೀಡಿದೆ.

ಅಧಿಕ ನಿದ್ರೆ ಕೇವಲ ಕೊಬ್ಬನ್ನು ಮಾತ್ರ ಹೆಚ್ಚಿಸುವುದಿಲ್ಲ, ಜೊತೆಗೆ ಗುದದ್ವಾರ ಕ್ಯಾನ್ಸರ್‌ಗೂ ಕಾರಣವಾಗುವ ಸಾಧ್ಯತೆ ಇದೆ ಎಂಬ ಭಯಾನಕ ಸಂಗತಿಯನ್ನು ವಿಜ್ಞಾನಿಗಳು ಬಹಿರಂಗಪಡಿಸಿದ್ದಾರೆ.

ಅತಿಹೆಚ್ಚು ನಿದ್ದೆಯಿಂದ ದೇಹದ ತೂಕ ಹೆಚ್ಚುತ್ತದೆ. ಜೊತೆಗೆ ಗುದದ್ವಾರ ಕ್ಯಾನ್ಸರ್ ಕೂಡ ಬರುತ್ತದೆ ಎನ್ನುವುದು ತಜ್ಞರ ವಾದ.

–ಟಿಪ್ಸ್

## ಸಮುದ್ರ ಮಥನ




### ರಾಜಕೀಯಕ್ಕೆ ಕನ್ನಡಿ

'ಸುಧಾ' ಮೇ 2ರ ಮುಖಪುಟ ಲೇಖನ ಬಿ.ಎಂ.ಹನೀಫ್‌ರ 'ಮಹಿಳೆಯರಿಗೆ ಟಿಕೆಟ್ ಇಲ್ಲ!' ಪ್ರಸ್ತುತ ರಾಜಕೀಯಕ್ಕೆ ಹಿಡಿದ ಕೈಗನ್ನಡಿಯಾಗಿತ್ತು.

–ಪಿ.ಎಲ್.ಆರಾಧ್ಯ, ಚಿತ್ರದುರ್ಗ, ಬಿ.ಆರ್. ಲಕ್ಷ್ಮಣರಾವ್, ಬೆಂಗಳೂರು

### ಹೊಸ ಕಲಿಕೆ ಸ್ವಾಗತಾರ್ಹ

ಬೇದ್ರೆ ಮಂಜುನಾಥ್ ಅವರ 'ಹೊಸ ಕಲಿಕಾ ಪ್ರಯೋಗಗಳು' ಉಪಯುಕ್ತವಾದ ಪ್ರಾಯೋಗಿಕವಾದ ಮಾಹಿತಿ ನೀಡಿತು.

–ಎಚ್.ಆನಂದಕುಮಾರ್, ಚಿತ್ರದುರ್ಗ

### ಗಾಯಕಗೆ ನುಡಿ ನಮನ

ಹೆಸರಾಂತ ಗಾಯಕ ಪಿ.ಬಿ.ಶ್ರೀನಿವಾಸ್‌ಗೆ ರ.ಚ.ಹರಳಾಪುರ ಅವರ ನುಡಿ ನಮನ ಸೂಕ್ತವಾಗಿತ್ತು.

–ಮಲ್ಲಿಕಾರ್ಜುನ ಗಚ್ಚಿ, ಗೋಗಿ/ 'ನಿಮಿತ್ತ', ಹಾಸನ/ ಆರ್.ಸಿ.ನಾಗರಾಜ್, ಪುತ್ತೂರು/ ಎಂ.ಮಹಾದೇವನ್, ಬೆಂಗಳೂರು

### ಪಿ.ಬಿ.ಜತೆ ಪಿವಿಎನ್ ನೆನಪೇಕೆ?

ರಾಜ್‌ರ ಹಾಡಿಗೆ ಪಿ.ಬಿ.ದನಿಯಾದವರು. ಹಾಗಾಗಿ ಅಖಂಡ ಕನ್ನಡ ಜನತೆ ಡಾ.ರಾಜ್‌ರನ್ನು ನೆನಪಿಸಿಕೊಂಡಂತೆ, ಪಿ.ಬಿ.ಶ್ರೀನಿವಾಸ್ ಅವರನ್ನೂ ನೆನಪಿಸಿಕೊಳ್ಳುವುದು ಅಪರೂಪದ ಸಂಗತಿ. ಅದು ಕನ್ನಡಿಗರ ದೊಡ್ಡತನ. ಅಂತಹ ಪ್ರತಿಭಾವಂತನ ಬಹುಭಾಷಾ ಪ್ರೇಮ ಸ್ಮರಿಸುವ ಸಂದರ್ಭದಲ್ಲಿ ಲೇಖಕರು ಪಿ.ವಿ.ನರಸಿಂಹರಾಯರ ಹೆಸರು ಹೇಳಬೇಕಿರಲಿಲ್ಲ.

–ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಉತ್ತಮ ಕಥೆಗೆ ಕಾಮಕೇಳಿ ಅಂತ್ಯ!

ಜಿ.ಶರಣಪ್ಪ ಅವರ 'ತಾಳಮೇಳ!' ಕಥೆಯ ಆರಂಭ ಸಹಜವಾಗಿ, ನೈಜವಾಗಿ ಇತ್ತು. ಆದರೆ ಕಾಮಕೇಳಿಯೊಂದಿಗೆ ಮುಕ್ತಾಯವಾದದ್ದು ಮುಜುಗರ ಉಂಟುಮಾಡಿತು. ಎಷ್ಟೆಂದರೂ ಪಾತ್ರಗಳು ಕಥೆಗಾರ ಕುಣಿಸಿದಂತೆ ಕುಣಿಯತ್ತವಲ್ಲವೆ? ಹಾಗಿದ್ದ ಮೇಲೆ ನಂದಿನಿಯ ಪುನರ್ವಿವಾಹ ಮಾಡಿಸಿದ್ದರೆ ಸರಿಯಾಗುತ್ತಿತ್ತು.

–ಕೊಹಿಮ, ಬಸರಕೋಡು/ ಎಲ್.ಎ.ಪರಮಶಿವಯ್ಯ, ಚಿತ್ರದುರ್ಗ

### ಚಿಂತನಾರ್ಹ ಲೇಖನ

ದುರ್ಗಾ ಎಸ್ ಭಟ್‌ರ 'ವಿಧವೆ ಏಕೆ ನಿಷಿದ್ಧಳು?' ಲೇಖನ ಚಿಂತನಾರ್ಹವಾಗಿತ್ತು.

–ವಿ.ಆರ್.ಕುಸುಮ, ಬೆಂಗಳೂರು

### ಹಣ್ಣಡಿಕೆ ಚೇಳು ಎಂದರೆ ಝುರಿ

ಏ.18ರ 'ನಿಮ್ಮ ಪುಟ'ದಲ್ಲಿ ಗುರುನಾಥ ಹುಕ್ಲಕೈ ಅವರು 'ಹಣ್ಣಡಿಕೆ ಚೇಳು' ಬಗ್ಗೆ ಬರೆದಿದ್ದಾರೆ. ಇದಕ್ಕೆ ಉತ್ತರ ಕರ್ನಾಟಕದಲ್ಲಿ 'ಝುರಿ' ಎಂದು ಕರೆಯುತ್ತಾರೆ. ಇದು ಕಡಿದರೆ ಅಪಾಯಕಾರಿ, ಕೂಡಲೇ ವೈದ್ಯರಿಗೆ ತೋರಿಸಬೇಕು.

–ಪತ್ರೇಶಿ ಹಿರೇಮಠ, ಹಗರಿ ಬೊಮ್ಮನಹಳ್ಳಿ

## ಕಾಮ ಪೂಜಾರಿ! ಪ್ರೇಮ ಪೂಜಾರಿ!

ಹೂಲಿ ಶೇಖರ್ ಅವರ 'ಜನುಮ ಜನುಮಕೂ' ಧಾರಾವಾಹಿ ವಾರದಿಂದ ವಾರಕ್ಕೆ ವಿಚಿತ್ರ ತಿರುವು ಪಡೆದುಕೊಳ್ಳುತ್ತಿದೆ. ಕಥೆ ಕಟ್ಟುವ ಕ್ರಮ ಕರಾರುವಾಕ್ಕಾಗಿದೆ. ಪ್ರೊಡ್ಯೂಸರ್ ಪಾಟೀಲ 'ಕಾಮ ಪೂಜಾರಿ', ಡೈರೆಕ್ಟರ್ ರಾಣಾ 'ಪ್ರೇಮ ಪೂಜಾರಿ.'

–ವಿನುತಾ ಹೆಗಡೆ, ಶಿರಸಿ

### ನೈಜ, ಆಪ್ತ ಧಾರಾವಾಹಿ



'ಜನುಮ ಜನುಮಕೂ' ಧಾರಾವಾಹಿ ನಮ್ಮ ಸಿನಿಮಾ ಮಂದಿಯದೇ ಕಥೆ ಎನ್ನುವಷ್ಟು ನೈಜವಾಗಿದೆ, ಆಪ್ತವಾಗಿದೆ.

–ಸುಂದರನಾಥ ಸುವರ್ಣ, ಬೆಂಗಳೂರು

### ರೋಜಿ ಎಲ್ಲಿಯಾದರೂ ಇರಬಹುದೆ?

ರೋಜಿ ಯಾರು? ನಿಜಕ್ಕೂ ಅವಳಿಗೆ ಪುನರ್ಜನ್ಮ ಆಗಿದೆಯಾ? ಧಾರಾವಾಹಿ ಓದುತ್ತಿದ್ದರೆ ನಿಜವೇ ಅನಿಸುತ್ತಿದೆ. ಈಗಾಗಲೇ ಓದುಗರೊಬ್ಬರು ರೋಜಿ ಎಂಬ ಹುಡುಗಿ ಇದ್ದಳು ಎಂದು ಹೇಳಿದ್ದಾರೆ. ಮುಂದೇನಾಗಬಹುದು ಎಂದು ಊಹಿಸುವುದು ಕಷ್ಟ ಎನ್ನುವ ಹಾಗೆ ಲೇಖಕ ಹೂಲಿ ಶೇಖರ್ ಜಾಣ್ಮೆಯಿಂದ ಕಥೆ ಹೆಣೆದಿದ್ದಾರೆ.

–ಮಾಲಿನಿ ಭಂಡಾರಿ, ಉಡುಪಿ

### ಕನ್ನಡದ ಕಥೆ ಗಮನಿಸಲಿ

ಕೆಟ್ಟ ಸಿನಿಮಾಗಳನ್ನು ಪರಭಾಷೆಯಿಂದ ಕೆಟ್ಟದಾಗಿ ನಕಲು ಮಾಡುವ ಗಾಂಧಿನಗರದ ಮಂದಿ ಕನ್ನಡದಲ್ಲಿ ಇಂತಹ ಅಪರೂಪದ ಕಥೆಗಳಿವೆ ಎಂದು ಒಮ್ಮೆ 'ಜನುಮ ಜನುಮಕೂ' ಕಾದಂಬರಿ ಓದಲಿ. ಆಗ ಕನ್ನಡದ ಸತ್ವ ಅವರಿಗೆ ಗೊತ್ತಾಗುತ್ತದೆ.

–ಮನೋಹರ್, ಜನ್ನು, ದಾಂಡೇಲಿ